## ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ

ಸಿಸಿ ನಂಬ್ರಃ 111-2024
ಸಿಡಬ್ಲ್ಯೂ- 08
ಪಿಡಬ್ಲ್ಯೂ- 06

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶುಭಕರ, |
| ತಂದೆಯ ಹೆಸರು | ಃ | ಅಣ್ಣು ಮೊಗೇರ, |
| ಪ್ರಾಯ | ಃ | 57 ವರ್ಷ, |
| ಉದ್ಯೋಗ | ಃ | ಪಿ ಎಸ್ ಐ ., ಅಜೆಕಾರು ಠಾಣೆ, |
| ವಾಸ | ಃ | ಹುಡ್ಕೋ ಕಾಲನಿ, ಕಾರ್ಕಳ. |

ದಿನಾಂಕಃ **16-07-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಾನು ದಿನಾಂಕ 22-02-2013 ರಿಂದ 29-06-2019 ರ ತನಕ ಶಂಕರನಾರಾಯಣ ಪೊಲೀಸ್ ಠಾಣೆಯಲ್ಲಿ ಎ ಎಸ್ ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 12-10-2016 ರಂದು ನಾನು ಠಾಣಾ ಪ್ರಭಾರದಲ್ಲಿಲದ್ದಾಗ ಸಂಜೆ 15.40 ಗಂಟೆಗೆ ಹಾಲಡಿ ದುರ್ಗಾ ಆಸ್ಪರ್ರೆಯಿಂದ ಠಾಣೆಗೆ ದೂರವಾಣಿ ಕರೆ ಮುಖಾಂತರ ಹಾಲಾಡಿ ಗ್ರಾಮದ ಬೆಳ್ವಾರಮಕ್ಕಿ ಎಂಬಲ್ಲಿ ಕಾರು ಹಾಗೂ ಆಟೋರಿಕ್ಷಾ ಅಪಘಾತವಾಗಿ ನರಸಿಂಹ, ಶಿರೆಮತಿ ಚಂದ್ರಾವತಿ, ಕು. ಸಿಂಚನ ಎನ್ನುವವರು ಗಾಯಗೊಂಡು ಹಾಲಾಡಿ ದುರ್ಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಬಗ್ಗೆ ದಾಖಲಾಗಿರುತ್ತಾರೆ ಎಂದು ಮಾಹಿತಿ ಬಂದ ಪ್ರಕಾರ ನಾನು ಹಾಲಾಡಿ ದುರ್ಗ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ಚಾ ಸಾ.1 ರವರನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡು ಠಾಣೆಗೆ ಬಂದು ಅಪರಾಧ ಸಂ.189/2016 ರಂತೆ ಕಲಂ 279, 337, 338 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರ. ವ. ವರದಿ ತಯಾರಿಸಿ, ಹಿರಿಯ ಅಧಿಕಾರಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಡಿರುತ್ತೆನೆ. ಸಾಕ್ಷಿ ಈಗ ಚಾ ಸಾ.1 ರವರ ಹೇಳಿಕೆಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಸದರಿ

ದಾಖಲೆಯನ್ನು ನಿಪಿ.1 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.1 ಬಿ ಎಂದೂ ಹಾಗೂ ಪ್ರ. ವ. ವರದಿಯನ್ನು ನಿಪಿ.8 ಎಂದು, ಸಾಕ್ಷಿ ಸಹಿಯನ್ನು ನಿಪಿ.8 ಎ ಎಂದೂ ಗುರುತಿಸಲಾಯಿತು.

ಪಿ ಎಸ್ ಐ ರವರು ಸದರಿ ಪ್ರಕರಣದಲ್ಲಿ ತನಿಖೆ ಮುಂದುವರಿಸುವಂತೆ ಮೌಖಿಕವಾಗಿ ತಿಳಿಸಿದ ಮೇರೆಗೆ ನಾನು ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪ್ರತ್ಯಕ್ಷ ಸಾಕ್ಷಿ ದಾರರಾದ ಚಾ ಸ.3 ರವರ ಸಮಕ್ಷಮ ಪಂಚರಾದ ಚಾ ಸಾ.4 ಮತ್ತು 5 ರವರನ್ನು ಬರಮಾಡಿಕೊಂಡು 17.45 ಗಂಟೆಯಿಂದ 18.00 ಗಂಟೆ ವೆರೆಗೆ ಮಹಜರು ತಯಾರಿಸಿರುತ್ತೇನೆ. ಸಾಕ್ಷಿ ಮಹಜರನ್ನು ನೋಡಿ ಗುರುತಿಸಿದ್ದು ಸದರಿ ಮಹಜರು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು, ಸಾಕ್ಷಿ ಸಹಿಯನ್ನು ನಿಪಿ.2 ಡಿ ಎಂದು ಗುರುತಿಸಲಾಯಿತು. ನಿಪಿ.2 ನ್ನು ಜರುಗಿಸುವ ಸಮಯ ಕಾರು ಹಾಗೂ ಆಟೋರಿಕ್ಷಾಗಳನ್ನು ನಿಪಿ.2 ರಡಿಯಲ್ಲೇ ಜಪ್ತು ಮಾಡಿಕೊಂಡಿರುತ್ತೇನೆ. ಪ್ರತ್ಯಕ್ಷ ಸಾಕ್ಷಿ ಚಾ ಸಾ.3 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ತದನಂತರ ಆಸ್ಪತ್ರೆಗೆ ಹೋಗಿ ಚಾ ಸಾ.1 ರವರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾ ಸಾ.2 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ತದನಂತರ ಠಾಣೆಗೆ ಬಂದು ವಶಪಡಿಸಿಕೊಂಡ ವಾಹನಗಳ ಐ ಎಂ ವಿ ವರದಿ ಕೊಡುವಂತೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಉಡುಪಿರವರಿಗೆ ಮನವಿ ಸಲ್ಲಿಸಿರುತ್ತೇನೆ. ತದನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾ ಸಾ.9 ರವರಿಗೆ ವಹಿಸಿರುತ್ತೇನೆ.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ ಯು ಎಸ್ ರವರಿಂದ</u>

ಆಸ್ಪತ್ರೆಯಿಂದ ಮಾಹಿತಿ ಬಂದ ಪ್ರಕಾರ ನಾನು ಹೋಗಿರುತ್ತೇನೆ. ಹೇಳಿಕೆಯನ್ನು ತೆಗೆದುಕೊಂಡ ನಂತರ ಸ್ಥಳಕ್ಕೆ ಗಹೋಗಿದ್ದೀರಾ ಎಂದರೆ ಸಾಕ್ಷಿ ಮಹಜರು ಸಮಯ ಹೋಗಿದ್ದೇನೆ ಎಂದು ನುಡಿಯುತ್ತಾರೆ. ನಾನು ಸ್ಥಳವನ್ನು ನೋಡಿ ಪ್ರ ವ ವರದಿ ತಯಾರಿಸಿರುವುದಿಲ್ಲ , ಸಾಕ್ಷಿ ಗಳು ಹೇಳಿದಂತೆ ಪ್ರ ವ ವರದಿ ತಯಾರಿಸಿರುತ್ತೇನೆ. ಆ ದಿನ ನಮ್ಮ ಠಾಣೆಂದು ಎಸ್ ಐ ರವರು ಎಲ್ಲಿ ಹೋಗಿದ್ದರು ಎಂದು ಗೊತ್ತಿರುವುದಿಲ್ಲ. .ನಿಖೆಯನ್ನು ಎಸ್ ಐ ರವರು ಮಾಡ ಬೇಕು ಎಂದರೆ ಸಾಕ್ಷಿ ನನಗೆ ಮೌಖಿಕವಾಗಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಠಾಣಾ ಡೈರಿಯಲ್ಲಿ ಎಸ್ ಐ ರವರು ವಿಚಾರಣೆ ಮಾಡು ಎಂದು ಹೇಳಿದ ವಿಚಾರವನ್ನು ಬರೆಯಲಾಗಿರುತ್ತದೆ. ಈ ಪ್ರಕರಣದಲ್ಲಿ ವಿಚಾರಣೆ ನಡೆಸಲು ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಸಾಕ್ಷಿಗಳು ಯಾವುದೇ ಮರು ಹೇಳಿಕೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಹಾಲಾಡಿಯಿಂದ ಹೋಗುವಾಗ ಪಂಚರನ್ನು ಕರೆದುಕೊಂಡು ಹೋಗಿರುತ್ತೇವೆ. ಪಂಚರು

ಸ್ಥಳೀಯರು. ಚಾ ಸಾ 4 ಮತ್ತು 5 ರವರು ಹಾಲಾಡಿ ಗ್ರಾಮದವರಲ್ಲ ಎಂದರೆ ಸರಿಯಲ್ಲ. ರಸ್ತೆ 15 ಅಡಿ ಇದ್ದು, ರಸ್ತೆಯ ಮಧ್ಯದಲ್ಲಿ ಅಪಘಾತವಾಗಿರುತ್ತದೆ ಎಂದು ಕಾಣಿಸುತ್ತದೆ ಎಂದರೆ ಸಾಕ್ಷಿ ಸರಿಯಲ್ಲ. ರಸ್ತೆಯ ಬದಿಯಲ್ಲಿ ಅಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ. ನಿಪಿ.2 ಮತ್ತು ಮಹಜರನ್ನು ಠಾಣೆಯಲ್ಲಿ ತಯಾರಿಸಿದ್ದು ಎಂದರೆ ಸರಿಯಲ್ಲ. ಸ್ಕೆಚನ್ನು ಠಾಣೆಯಲ್ಲೇ ತಯಾರಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಸ್ಕೆಚನ್ನು ತೋರಿಸಿದ್ದರ ಮೇರೆಗೆ ಸಾಕ್ಷಿ ಸ್ಕೆಚನ್ನು ತಾನೇ ಬರೆದಿರುತ್ತೇನೆ ಎಂದು ಹೇಳಿದ್ದರಿಂದ ಅದನ್ನು ನಿಪಿ.9 ಎಂದು ಗುರತಿಸಲಾಯಿತು. ನಿಪಿ.9 ರಲ್ಲಿ ಸಾಕ್ಷಿಗಳ ಸಹಿ ಇರುವುದಿಲ್ಲ ಎಂದರೆ ಸರಿ. ಆ ದಿನ ರಿಕ್ಷಾ ಚಾಲಕನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಸರಿಯಾಗಿ ತನಿಖೆ ಮಾಡದೇ ಆತನ ವಿರುದ್ಧ ಸುಳ್ಳು ದೋಷಾರೋಪಣೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರಕರಣದಲ್ಲಿ ಕಾರಿನ ಚಾಲಕ ಅಜಾಗರೂಕತಯಿಂದ ಚಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಪ್ರರಕಣದಲ್ಲಿ ತನಿಖೆ ನಡೆಸಲು ಯಾವುದೇ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ_ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ